# ಕರ್ನಾಟಕ ಸರ್ಕಾರ

ನಂ.ಗ್ರಾಅಪ 171 ಗ್ರಾಪಂಅ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 12-05-2017.

## ಸುತ್ತೋಲೆ

ವಿಷಯ: ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ವಿರುದ್ಧ ಇಲಾಖಾ ವಿಚಾರಣೆ ಆರಂಭಿಸುವುದರಲ್ಲಿ ವಿಳಂಬವನ್ನು ತಡೆಗಟ್ಟಲು ಸೂಚನೆಗಳು.

****

ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ವಿರುದ್ಧ ದುರ್ನಡತೆ, ಕರ್ತವ್ಯ ನಿರ್ಲಕ್ಷ್ಯತೆ, ಹಣದ ದುರುಪಯೋಗ, ಅಪವಿನಿಯೋಗ, ಭ್ರಷ್ಟಾಚಾರದ ಆರೋಪ ಮುಂತಾದ ಅನೇಕ ಆರೋಪಗಳಿಗೆ ಸಂಬಂಧಿಸಿದ ಹಲವಾರು ಇಲಾಖಾ ವಿಚಾರಣಾ ಪ್ರಕರಣಗಳು ಜಿಲ್ಲಾ ಪಂಚಾಯತಿ ಹಂತದಲ್ಲಿ ಬಾಕಿ ಇರುವುದು ಹಾಗೂ ಸದರಿ ನೌಕರರು ವಯೋನಿವೃತ್ತಿ ಹೊಂದಿದ ನಂತರ ಇಲಾಖಾ ವಿಚಾರಣಾ ವರದಿಯನ್ವಯ ಸರ್ಕಾರದ ಹಂತದಲ್ಲಿ ಶಿಸ್ತು ಕ್ರಮ ಜರುಗಿಸಲು ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೇಲ್ಕಂಡ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ವಿಚಾರಣಾ ಪ್ರಕ್ರಿಯೆಯು ಅನಗತ್ಯ ವಿಳಂಬ ಮತ್ತು ವಿಳಂಬ ದ್ರೋಹದಿಂದಾಗಿ ಸಮರ್ಪಕವಾಗಿ ನಡೆಯದೆ ಆಡಳಿತದಲ್ಲಿ ನಿರ್ಲಕ್ಷ್ಯದ ಮನೋಭಾವ ಉಂಟಾಗುತ್ತಿದೆ. ಆದುದರಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ವಿರುದ್ಧದ ಶಿಸ್ತಿನ ಪ್ರಕರಣಗಳನ್ನು ಆರಂಭಿಸುವುದರಲ್ಲಿ, ನಡೆಸುವುದರಲ್ಲಿ ಹಾಗೂ ಅಂತಿಮಗೊಳಿಸುವುದರಲ್ಲಿ ವಿಳಂಬವನ್ನು ತಡೆಗಟ್ಟಲು ಹಾಗೂ ಬಾಕಿ ಇರುವ ಶಿಸ್ತಿನ ಪ್ರಕರಣಗಳಲ್ಲಿ ಶಿಸ್ತಿನ ಕ್ರಮ ಆರಂಭಿಸಿ, ಮುಕ್ತಾಯಗೊಳಿಸಲು ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

1) ಶಿಸ್ತು ಕ್ರಮಕ್ಕೆ ಪರಿಗಣಿಸಿದ ಅಧಿಕಾರಿ/ಸಿಬ್ಬಂದಿಗೆ ದೋಷಾರೋಪಣೆಗಳ ಪಟ್ಟಿಯನ್ನು ನೀಡುವಲ್ಲಿ ವಿಳಂಬವಾಗದಂತೆ ತಡೆಯಲು ಶಿಸ್ತು ಕ್ರಮ ಪ್ರಾರಂಭಿಸಿದ ಒಂದು ತಿಂಗಳೊಳಗಾಗಿ ಅನುಬಂಧ-1 ರಿಂದ 4 ದೋಷಾರೋಪಣೆಗಳ ಪಟ್ಟಿಯನ್ನು ಸಿದ್ದಪಡಿಸಿ ಹೊರಡಿಸಲು ಕ್ರಮ ಕೈಗೊಳ್ಳುವುದು.
2) ದೋಷಾರೋಪಣೆಗಳ ಪಟ್ಟಿಯಲ್ಲಿ ಅಧಿಕಾರಿ / ನೌಕರರು ಎಸಗಿರುವ ದುರ್ನಡತೆಯ ಸ್ಪಷ್ಟ ವಿವರಣೆ, ಸದರಿ ದುರ್ನಡತೆಯಿಂದ ಯಾವ ನಿಯಮಗಳನ್ನು / ಕಾನೂನನ್ನು ಉಲ್ಲಂಘಿಸಿಲಾಗಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.
3) ಶಿಸ್ತು ಕ್ರಮಕ್ಕೆ ಪರಿಗಣಿಸಿ ಅಮಾನತ್ತಿನಂತಹ ತತ್‌ಕ್ಷಣದ ಕ್ರಮಕ್ಕೊಳಗಾದ ಅಧಿಕಾರಿ/ ನೌಕರರುಗಳ ಮೇಲೆ ನ್ಯಾಯಾಲಯಗಳು ಪುನರ್‌ಸ್ಥಾಪನೆ ಆದೇಶ ನೀಡುವುದನ್ನು ಕನಿಷ್ಠಗೊಳಿಸಲು ಇಲಾಖೆಯು ಈಗಾಗಲೇ ಸ್ಥಾಪಿಸಿರುವ ನ್ಯಾಯವಾದಿಗಳ ಘಟಕದ ಮೂಲಕ ಸೂಕ್ತವಾದ ಕೆವಿಯೆಟ್ ಸಲ್ಲಿಸಲು ಕ್ರಮ ಕೈಗೊಳ್ಳುವುದು.
4) ಶಿಸ್ತುಕ್ರಮ ಮತ್ತು ವಿಚಾರಣಾಧಿಕಾರಿಯ ನೇಮಕ ಇತ್ಯಾದಿ ಕುರಿತು ಒಂದು ಚೆಕ್ ಲಿಸ್ಟನ್ನು ಸಿದ್ದಪಡಿಸಿ ಆ ಚೆಕ್ ಲಿಸ್ಟ್‌ನಲ್ಲಿ ಎಲ್ಲಾ ಕ್ರಮಗಳು ಏಕಕಾಲಕ್ಕೆ ಅನುಮೋದನೆಗೊಳ್ಳುವಂತೆ ಕ್ರಮ ಕೈಗೊಳ್ಳುವುದು.

5) ಭ್ರಷ್ಟಾಚಾರ ನಿಷೇಧ ಕಾಯ್ದೆ ಅಥವಾ ಇನ್ನಾವುದೇ ಸ್ಥಳೀಯ ಕಾನೂನಿನನ್ವಯ ಭ್ರಷ್ಟಾಚಾರ ವಿರೋಧಿ ಕ್ರಮಗಳನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಅಂಥ ಅಧಿಕಾರಿ/ಸಿಬ್ಬಂದಿಯವರ ಮೇಲೆ ಕ್ರಮ ಅಥವಾ ವಿಚಾರಣೆ ಪ್ರಾರಂಭಿಸಿದ (ಅವರ ನಿವಾಸ ಕಛೇರಿಗಳ ಮೇಲೆ ದಾಳಿ ನಡೆದಿದ್ದರೆ, ದೂರು ದಾಖಲಾಗಿದ್ದರೆ ಅಥವಾ ಟ್ರ್ಯಾಪ್ ಆಗಿದ್ದರೆ) 48 ಗಂಟೆಯೊಳಗೆ ಆಯಾ ಅಧಿಕಾರಿ/ಸಿಬ್ಬಂದಿಗಳ ಮುಖ್ಯಸ್ಥರು/ಇಲಾಖಾ ಮುಖ್ಯಸ್ಥರು ಸರ್ಕಾರಕ್ಕೆ ಕಡ್ಡಾಯವಾಗಿ ಕಡತದಲ್ಲಿ ವರದಿ ಸಲ್ಲಿಸತಕ್ಕದ್ದು.

6) ವಿಚಾರಣೆ ಅಧಿಕಾರಿಗಳು ಅಥವಾ ವಿಚಾರಣಾ ನ್ಯಾಯಾಧೀಶರು ತಮ್ಮ ನೇಮಕದ ದಿನಾಂಕದಿಂದ 3 ತಿಂಗಳೊಳಗಾಗಿ ವರದಿ ಸಲ್ಲಿಸುವುದು.

7) ವಿಚಾರಣಾಧಿಕಾರಿಗಳು ಮತ್ತು ವಿಚಾರಣಾ ನ್ಯಾಯಾಧೀಶರ ಕಾರ್ಯನಿರ್ವಹಣೆಗೆ ಕಛೇರಿ ಮತ್ತು ಸಿಬ್ಬಂದಿಯನ್ನು ಶಾಶ್ವತವಾಗಿ ಒದಗಿಸಬೇಕು.

8) ಮಂಡನಾಧಿಕಾರಿಗಳ ಒಂದು ಪಟ್ಟಿಯನ್ನು ಸಿದ್ಧವಾಗಿಟ್ಟುಕೊಂಡು ಬೇರೆ ಬೇರೆ ವಿಚಾರಣೆಗಳಿಗೆ ತಕ್ಷಣ ನೇಮಕಗೊಳ್ಳುವಂತೆ ಕೈಗೊಳ್ಳಬೇಕು.

9) ನಿವೃತ್ತಿ ಅಂಚಿನಲ್ಲಿರುವ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಪ್ರಕರಣಗಳನ್ನು ಯಾವುದೇ ವಿಳಂಬ ಮಾಡದೆ ಕಾಲಮಿತಿಯೊಳಗೆ ಮಾಡಬೇಕು. ಅಂತಹ ವಿಚಾರಣೆಯು ಕಾಲಮಿತಿಯನ್ನು ಮೀರಿದ್ದಾದಲ್ಲಿ ವಿಳಂಬಕ್ಕೆ ಜವಾಬ್ದಾರರಾದ ಅಧಿಕಾರಿ/ ನೌಕರರುಗಳನ್ನು ಗುರುತಿಸಿ ಅವರುಗಳ ವಿರುದ್ಧ ಕ್ರಮ ಜರುಗಿಸಲಾಗುವುದು.

10) ಸೇವೆಯಲ್ಲಿರುವಾಗ ಅನಗತ್ಯ ವಿಳಂಬ ಮಾಡಿ, ನಿವೃತ್ತಿಯಾದ ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಅಧಿಕಾರಿ/ ನೌಕರರುಗಳನ್ನು ಗುರುತಿಸಿ ಅವರುಗಳ ವಿರುದ್ಧ ಕ್ರಮ ಜರುಗಿಸಲಾಗುವುದು.

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

12/5

**ಗೆ:**

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
2) ಎಲ್ಲಾ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿಗಳು.
3) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
4) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಯವರಿಗೆ.
3. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.